ಆಲೋಚನೆ ಮಾಡಿದರೆ ಅವರಿಗೂ ಕೂಡ ಅರಿವಾಗುತ್ತದೆ. ಅವರು ಮತ್ತೊಂದು ಮಾತನ್ನು ಹೇಳಿದರು, ತತ್ವವೇನೋ ಬಹಳ ಒಳ್ಳೆಯದು, ಸಿಕ್ಕಿಂ ಸೇರತಕ್ಕದ್ದು ಅಡ್ಡಿ ಇಲ್ಲ, ಆದರೆ ಹೋಗಿರತಕ್ಕಂಥ ರೀತಿ ಸರಿಯೋ ಅಲ್ಲವೊ. ಆದರಲ್ಲಿ ಸರ್ವಾಧಿಕಾರತ್ವ ಕಂಡುಬರುತ್ತದೆ ಎಂದು ಹೇಳಿದರು. ಈ ಸಿಕ್ಕಿಂ ಜನತೆ ಇಚ್ಛೆಯೇ ಸಾರ್ವಭೌಮಾಧಿಕಾರ, ಅದು ಅಲ್ಲಿಂದ ಪ್ರತಿಬಿಂಬಿತವಾಗಿದೆ. ಆದನ್ನು ನಾವು ನಿರ್ಣಯದ ರೂಪದಲ್ಲಿ ತಿಳಿಸಿದ್ದೇವೆ. ಆದ್ದರಿಂದ ಇದರ ಬಗ್ಗೆ ಶ್ರೀಮಾನ್ ಶಾಮಣ್ಣನವರಿಗೆ ಹೆಚ್ಚು ಅನುಮಾನಗಳು ಬೇಡ ಎಂದು ತಿಳಿಸಲಿಚ್ಛಿಸುತ್ತೇನೆ. ಮತ್ತೊಂದು ವಿಚಾರ ಹೇಳಿದರು Who are our friends, ನಮಗೆ ಸ್ನೇಹಪರ ರಾಷ್ಟ್ರಗಳು ಯಾರು ಎಂದು. ಬಾಂಗ್ಲಾ ದೇಶದ ಯುದ್ಧ ನಡೆಯುತಕ್ಕ ಕಾಲದಲ್ಲಿ ಇಡೀ ವಿಶ್ವಕ್ಕೆ ಗೊತ್ತು ನಮ್ಮ ಸ್ನೇಹಪರ ರಾಷ್ಟ್ರಗಳು ಯಾವುದು ಎಂದು. ಶಾಮಣ್ಣನವರಿಗೆ ಅನುಮಾನ ಇರಬಹುದು. ಅದರ ಬಗ್ಗೆ ನಮಗೆ ಅನುಮಾನ ಉಳಿದಿಲ್ಲ. ಭಾರತ ದೇಶಕ್ಕೆ ಸ್ನೇಹಪರ ರಾಷ್ಟ್ರಗಳು ಇವೆ. ಆಫ್ರಿಕಾದಲ್ಲಿ, ಏಷ್ಯಾದಲ್ಲಿ, ಯೂರೋಪ್‌ನಲ್ಲಿ ಇವೆ. ಹೊಸದಾಗಿ ಹುಡುಕಬೇಕಾಗುವ ಗುರುತಿಸ ಬೇಕಾಗುವ ಪ್ರಮೇಯ ಇಲ್ಲ ಎಂದು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಇವು ಸಾಮ್ರಾಜ್ಯವಾದಿ ಅವಶೇಷ ಗಳು ಎಂದು ಹೇಳಿ ಗೆಳೆಯ ಎಂ.ಎಸ್. ಕೃಷ್ಣನ್ ಅವರು ಬಹಳ ಸೂಕ್ಷ್ಮವಾಗಿ ಹೇಳಿದ್ದಾರೆ. ಈ ಅವಶೇಷ ಗಳನ್ನು ನಿರ್ಮೂಲ ಮಾಡುವುದಕ್ಕಾಗಿಯೇ ಈ ಒಂದು ಗೊತ್ತು ವಳಿ. ಕಾಗೋಡು ತಿಮ್ಮಪ್ಪನವರು ನಮ್ಮ ವಿದೇಶಾಂಗ ನೀತಿಯ ಮಂತ್ಸದ್ದಿತನದ ಬಗ್ಗೆ ಒಳ್ಳೆಯ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಿದ್ದಾರೆ. ಶ್ರೀಮಾನ್ ಬಂಗಾರಪ್ಪನವರು ಕಳೆದ ಸಾರಿ ಸಿಕ್ಕಿಂ ಸ್ಟೇಟ್‌ಹುಡ್ ಬಿಲ್ಲನ್ನು ಮಂಡಿಸತಕ್ಕ ಕಾಲದಲ್ಲಿ ಕೆಲವಾರು ಕ್ಲಾರಿಫಿಕೇಷನ್ ಕೇಳಬೇಕು ಎಂದು ಅಗ್ರಹಪೂರ್ವಕವಾಗಿ ಕೇಳಿದರು. ಆದರೆ ಅವತ್ತು ಕೇಳಿ ದಂತಹ ಕ್ಲಾರಿಫಿಕೇಷನ್‌ಗೆ ಇವತ್ತಿನ ದಿನ ಗೊತ್ತುವಳಿಯಲ್ಲಿ ಉತ್ತರ ದೊರೆತಿದೆ ಎಂದು ನನಗೆ ಅನಿಸುತ್ತಾ ಗಿರತಕ್ಕ ಸಮಾಧಾನ. ಒಟ್ಟಿನಲ್ಲಿ ಅಧ್ಯಕ್ಷರೆ ನಾನೂ ಹೇಳತಕ್ಕದ್ದು ಏನೂ ಇಲ್ಲ. ಸಿಕ್ಕಿಂನ ಜನತೆಯನ್ನು ಭಾರತದ ಜನತೆಯ ಜೊತೆಯಲ್ಲಿ ಸ್ನೇಹ ಮತ್ತು ವಿಶ್ವಾಸದಿಂದ ಸೇರುವುದಕ್ಕೆ ಈ ಸಭೆಯೂ ಸಹ ವಿುಕ್ಕ ಶಾಸನಸಭೆಗಳ ಜೊತೆಯಲ್ಲಿ, ಸಂಸತ್ತಿನ ಜೊತೆಯಲ್ಲಿ ಅವರಿಗೆ ಆಹ್ವಾನ ನೀಡುತ್ತೇವೆ. ನಮ್ಮ ಅವರ ಸಂಬಂಧ ನಿರಂತರವಾಗಿ, ಅವ್ಯಾಹತವಾಗಿ ಮುಂದುವರೆಯಲಿ ಎಂದು ಆಶಿಸಿ ಈ ಗೊತ್ತುವಳಿಯನ್ನು ಅಂಗೀಕಾರ ಮಾಡಬೇಕು ಎಂದು ಈ ಸದನವನ್ನು ಕೇಳಿಕೊಳ್ಳುತ್ತೇನೆ.

MEDAM SPEAKER.—I will put the Motion to the vote of the House. The question is :

> "THAT this House ratifies the amendments to the Constitution of India falling within the purview of the proviso to clause (2) of Article 368 thereof, proposed to be made by the Constitution (Thirty-eighth Amendment) Bill 1975, as passed by the two Houses of Parliament, which seeks to make Sikkim a State in the Union and the Short title of which has been changed into "the Constitution (Thirty-sixth Amendment) Act, 1975".

The motion was adopted and the Official Resolution unanimously passed.

Requests for taking up some notices

SRI T. R. SHAMANNA.—I have given a notice. The Finance Corporations are in a very bad position now and many people are put to hardship.

ಅಧ್ಯಕ್ಷರು.—ಈಗ ನಾವು ಅಜೆಂಡಾದಲ್ಲಿ ಯಾವುದೂ ಹಾಕಿಲ್ಲ. ಇವತ್ತು ಸ್ಪೇಷಲ್ ಮಿಾಟಿಂಗ್ ಕರೆದಿದ್ದೇವೆ. ಮಾನ್ಯ ಸದಸ್ಯರು ನೋಟೀಸ್ ಕೊಟ್ಟಿದ್ದಾರೆ. ಆದರೆ ಈಗ ಫೈನಾನ್ ಮಿನಿಸ್ಟರ್ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ನಾನೂ ಕೂಡ ಒಂದು ನೋಟೀಸ್ ಕಳುಹಿಸಿದ್ದೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ನೋಟೀಸನ್ನು ಒಂದು ಐವತ್ತೈದಕ್ಕೆ ಕಳುಹಿಸಿದ್ದಾರೆ. ನಾನು ಅದನ್ನು ಸರ್ಕಾರದವರಿಗೆ ಕಳುಹಿಸಿಂವುದಕ್ಕೂ ಆಗಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಕರ್ನಾಟಕ ಮಹಾರಾಷ್ಟ್ರ ಗಡಿ ವಿಷಯ ಪ್ರಮುಖವಾದ ವಿಷಯ.

ಅಧ್ಯಕ್ಷರು.—ಅದು ಒಪ್ಪಿಕೊಳ್ಳುತ್ತೇನೆ. ಆದರೆ ಆ ವಿಷಯಂ ಈ ಸಂದರ್ಭದಲ್ಲಿ ಬರುವುದಿಲ್ಲ.

The House now adjourns *sine-die*.

(*The House adjourned* sine-die *at Four of the Clock*).

WD 2635—GPB—550—23-8-1972